ಅಮ್ಮನಿಲ್ಲದಾಗ ಹೊಡೆದಾಟ ಮಾಡ ತೊಡಗಿದರು. ಅಜ್ಜ, ಅಜ್ಜಿ ಅವರಿಬ್ಬರಿಗೆ ಹೇಳಿ ಸೋತು ಹೋಗಿದ್ದರು. ಮೊದಲು ಅಜ್ಜ, ಅಜ್ಜಿಯ ಮಾತು ಕೇಳುತ್ತಿದ್ದ ವಿನಮ್ರ ಮಕ್ಕಳು ಅಂತಹ ಕ್ರೂರ ದೃಶ್ಯಾವಳಿ ನೋಡುತ್ತಾ ಅದನ್ನೇ ಅನುಕರಿಸುತ್ತಾ ಒರಟರಾಗತೊಡಗಿದರು. ಹಟಮಾರಿ ಸ್ವಭಾವ ಬೆಳೆಸಿಕೊಂಡು ತಮ್ಮ ಮಾತನ್ನೇ ಸಾಧಿಸುವ ಪ್ರವೃತ್ತಿ ಬೆಳೆಸಿಕೊಳ್ಳತೊಡಗಿದರು.

ಅಮ್ಮ ಅವರಿಬ್ಬರ ಹೊಡೆದಾಟದ ಮಾಹಿತಿಯನ್ನು ಅಜ್ಜಿಯಿಂದ ದಿನವೂ ಕೇಳುವಂತೆ ಆಯಿತು; ಸೂಕ್ತ ಸಂದರ್ಭದಲ್ಲಿ ಅವರಿಗೆ ಬುದ್ಧಿ ಹೇಳಬೇಕು ಎಂದು ಕಾಯುತ್ತಿದ್ದಳು. ಒಮ್ಮೆ ಪುಟ್ಟಿಯ ಹಣೆಯ ಎಡ ಬದಿ ಟೊಮ್ಯಾಟೊದಂತೆ ಉಬ್ಬಿದ್ದು ನೋಡಿ ಅಮ್ಮ 'ಅದೇನು?' ಎಂದು ಕೇಳಿದಳು. ಅದು ಸೋನು, ಪುಟ್ಟಿಗೆ ನೀಡಿದ ಏಟಾಗಿತ್ತು. ತಂಗಿ ತನ್ನ ಬಗೆಗೆ ದೂರುತ್ತಾಳೆ ಎಂದು ಭಯಗೊಂಡ ಸೋನು ಅಂದು ಅಮ್ಮನ ಹತ್ತಿರ ಬರಲೇ ಇಲ್ಲ. ಅಮ್ಮ ಈ ವಿಷಯ ತಿಳಿದೂ ಸುಮ್ಮನಿದ್ದಳು.

ಮರುದಿನ ಸೋನುನ ಕಾಲು ನೋವಾಗಿದ್ದು ಅವನು ಕುಂಟುತ್ತಾ ನಡೆಯುತ್ತಿದ್ದ; ಅದು ಪುಟ್ಟಿ ಅಣ್ಣನಿಗೆ ಒದ್ದಿದ್ದಕ್ಕೆ ಆಗಿದ್ದ ಪೆಟ್ಟಾಗಿತ್ತು. ಪುಟ್ಟಿಗೆ ಅಮ್ಮನ ಭಯವಿದ್ದರೂ ನಿನ್ನೆ ಅಣ್ಣನಿಗೆ ಏನೂ ಶಿಕ್ಷೆ ನೀಡಿಲ್ಲ ಎಂದು ಮತ್ತೆ ಹಳೆಯ ಆಟವನ್ನೇ ಆಡುತ್ತ ಆಕೆ ಆರಾಮಾಗಿಯೇ ಇದ್ದಳು.

ಪರಸ್ಪರರು ಹೊಡೆದಾಡಿಕೊಂಡು ಇಬ್ಬರೂ ನೋವು ಮಾಡಿಕೊಂಡಿದ್ದು ಎಂದು ಅಮ್ಮನಿಗೆ ಗೊತ್ತಾಯಿತು. ಆಗ ಅಮ್ಮ ಅವರಿಬ್ಬರನ್ನು ಮುಂದೆ ಕೂರಿಸಿಕೊಂಡು ಯೂಟ್ಯೂಬಿನಲ್ಲಿ ಹೊಡೆದಾಟದ ದೃಶ್ಯಾವಳಿಗಳು ಹೇಗೆ ಹುಸಿಯಾಗಿರುತ್ತವೆ ಎಂಬುದನ್ನು 'ಮೇಕಿಂಗ್ ಆಫ್ ಫೈಟ್ ಸೀನ್' ಎಂದು ಕೀಲಿಸಿ ತೋರಿಸಿದಳು. ಸಿನಿಮಾಗಳಲ್ಲಿ ನಾವು ನೋಡುವ ದೃಶ್ಯಗಳೂ ಹೇಗೆ ಮಾರ್ಪಾಡು ಮಾಡಿರುತ್ತಾರೆ? ಹೇಗೆ ಅವು ನಿಜವಲ್ಲ? ನಟರಿಗೆ ಏಟಾಗದಂತೆ ಏನೇನು ಕ್ರಮ ಕೈಗೊಳ್ಳುತ್ತಾರೆ ಎಂಬುದನ್ನು ತೋರಿಸಿದಳು. ಮೇಲಿನಿಂದ ಜಿಗಿದು ಬೀಳುವಾಗ ಕೆಳಗಿರುವ ಮೆತ್ತನೆಯ ಹಾಸಿಗೆ, ತಲೆಯನ್ನು ಗೋಡೆಗೆ ಹೊಡೆಸಿದಾಗ ಅಲ್ಲಿ ಮೆತ್ತನೆಯ ಪಟ್ಟಿ ಇಟ್ಟಿದ್ದು ಅದನ್ನು ಕಂಪ್ಯೂಟರ್‌ನಲ್ಲಿ ಎಡಿಟ್ ಮಾಡುವುದು ಎಲ್ಲ ನೋಡಿ ಮಕ್ಕಳು ಬೆರಗಾದರು. ಒಂದು ವೇಳೆ ಅಂತಹ ಹೊಡೆದಾಟ, ಸಾಹಸ ನಿಜವಾಗಿಯೂ ಮಾಡಿದರೆ ನಿಮ್ಮಿಬ್ಬರಿಗೂ ಆದಂತೆ ಅವರಿಗೂ ನಿಜವಾದ ಗಾಯಗಳು ಆಗುತ್ತವೆ ಎಂದು ಹೇಳಿದಳು. ಮಕ್ಕಳಿಗೆ ಅಮ್ಮನ ಮಾತು ಮನವರಿಕೆ ಆಯಿತು. ಮಕ್ಕಳು ಅಂತಹ ಕಾರ್ಟೂನ್ ನೋಡುವುದನ್ನು ಬಿಟ್ಟರು.



# ಕೂಸಿನ ಆಸೆ

■ ನರಸಿಂಹಾರೆಡ್ಡಿ ಯಂಕಾಮೋಳ, ಸೇಡಂ
ಕಲೆ: ಸಂತೋಷ್ ಸಸಿಹಿತ್ಲು

ಕಾಡೊಳಗಿನ
ನವಿಲಿನಂತೆ
ನಾ ನಲಿಯುವಾಸೆ

ದಡದಿರುವ
ಹಂಸಗಳಂತೆ
ನಾ ನಡೆಯುವಾಸೆ

ಹಯರಾಜ
ಕುದುರೆಯಂತೆ
ನಾ ಓಡಾಡುವಾಸೆ

ಫಲ ತಿನ್ನುವ
ಗಿಣಿಗಳಂತೆ
ನಾ ನುಡಿಯುವಾಸೆ

ಕೆರೆಯಲ್ಲಿನ
ಮೀನಿನಂತೆ
ನಾ ಈಜಾಡುವಾಸೆ

ರೆಕ್ಕೆಬಡಿವ
ಪಾರಿವಾಳದಂತೆ
ನಾ ಹಾರಾಡುವಾಸೆ

ತೊದಲುವ
ಮೊದಲನುಡಿ
ಕನ್ನಡ ಪದವಾಗುವಾಸೆ

## ಕುಂಚ ಪ್ರಪಂಚ





**ನಿಯತಿ ಉಪಾಧ್ಯಾಯ**
3ನೇ ತರಗತಿ,
ಸೋಫಿಯಾ ಹೈಸ್ಕೂಲ್,
ಬೆಂಗಳೂರು